ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದಲ್ಲಿ ಇರತಕ್ಕ ಅರಣ್ಯಭೂಮಿ -14, 821 ಹೆಕ್ಟೇರ್.

ಆ) ಹೌದು.

ಇ) ಯಾವುದೇ ಒತ್ತುವರಿ ಪ್ರಕರಣ ಇರುವುದಿಲ್ಲ.

ಈ) ಅರಣ್ಯ ಇಲಾಖೆಯು ಉಪಯೋಗಿಸದೇ ಇರುವ ಅರಣ್ಯ ಭೂಮಿ ಇರುವುದಿಲ್ಲ.

ಉ) ಇಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಪಂಗಡಗಳ ಆಡಳಿತ ಮಂಡಳಿ ನಡೆಸುವ ಖಾಸಗಿ ಪ್ರೌಢಶಾಲೆಗಳು

2883 - ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ: ಪಂಗಡಗಳ ಆಡಳಿತ ಮಂಡಳಿಗಳು ಎಷ್ಟು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ನಡೆಸಲು ಸರ್ಕಾರವು ಅನುಮತಿ ನೀಡಿದೆ; (ತಾಲ್ಲೂಕುವಾರು ವಿವರ ನೀಡುವುದು)?

ಆ) ಈ ಶಾಲೆಗಳಿಗೆ ಸರ್ಕಾರವು ಅನುದಾನ ನೀಡುತ್ತದೆಯೇ?

ಇ) ಉತ್ತಮ ಫಲಿತಾಂಶ ನೀಡಿ ಸಮರ್ಪಕವಾಗಿ ನಡೆಸುತ್ತಿರುವ ಈ ಖಾಸಗೀ ಪ್ರೌಢಶಾಲೆಗಳಿಗೆ ಅನುದಾನ ನೀಡಲು ಸರ್ಕಾರ ಕ್ರಮ ಕೈಗೊಳ್ಳತ್ತದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ)

	ತಾಲ್ಲೂಕು	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ
1.	ಚಿತ್ರದುರ್ಗ	10	21
2.	ಹಿರಿಯೂರು	03	14
3.	ಚಳ್ಳಕೆರೆ	15	31
4.	ಮೊಳಕಾಲ್ಮೂರು	03	09
5.	ಜಗಳೂರು	07	05
6.	ದಾವಣಗೆರೆ ಉತ್ತರ : ದಕ್ಷಿಣ	18	24
7.	ಹರಿಹರ	03	10
8.	ಹೊಳಲ್ಕೆರೆ	07	08
9.	ಹೊಸದುರ್ಗ	14	17

ಆ) ಮತ್ತು ಇ) ದಿನಾಂಕ: 1.6.87ರ ನಂತರ ಪ್ರಾರಂಭವಾದ ಎಲ್ಲಾ ಶಾಲೆಗಳು ಶಾಶ್ವತ ಅನುದಾನ ರಹಿತ ಶಾಲೆಗಳಾಗಿದ್ದು, ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕಳ್ಳಂಬೆಳ್ಳ ಕ್ಷೇತ್ರದ ಹುಳಿಯಾರು ಪ್ರಥಮ ದರ್ಜೆ ಕಾಲೇಜಿಗೆ ಉಪನ್ಯಾಸಕರನ್ನು ನಿಯೋಜಿಸುವುದು

2884 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳ್ಳಂಬೆಳ್ಳ ಕ್ಷೇತ್ರದ ಹುಳಿಯಾರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು 1992-93ರಲ್ಲಿ ಮಂಜೂರಾಗಿ ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯ ಏರಿಕೆ ಪ್ರಮಾಣದಲ್ಲಿದ್ದರೂ ಅಗತ್ಯ ಉಪನ್ಯಾಸಕರು ಮತ್ತು ಸಿಬ್ಬಂದಿ ಇಲ್ಲದೆ ಪಾಠಪ್ರವಚನಕ್ಕೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ತತ್‌ಕ್ಷಣ ಅಗತ್ಯ ಉಪನ್ಯಾಸಕರು ಹಾಗೂ ಸಿಬ್ಬಂದಿಗಳನ್ನು ಸದರಿ ಕಾಲೇಜಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವಿರಾ? ಈ ಬಗ್ಗೆ ಸರ್ಕಾರದ ನಿಲುವೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) :

ಅ) ಹೌದು, ಅರ್ಥಶಾಸ್ತ್ರ ಮತ್ತು ಆಂಗ್ಲ ಭಾಷೆಗಳಲ್ಲಿ ಮಾತ್ರ ಉಪನ್ಯಾಸಕರ ಕೊರತೆ ಇದೆ.

ಆ) ಹೌದು, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಗ್ರಂಥಾಲಯಗಳು

2885- ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಗ್ರಂಥಾಲಯಗಳ ಒಟ್ಟು ಸಂಖ್ಯೆ ಎಷ್ಟು; ಯಾವ ಯಾವ ಭಾಗದಲ್ಲಿ ಇವೆ?*

ಆ) *ಬೆಳೆಯುತ್ತಿರುವ ಮಹಾನಗರ ಮತ್ತು ಓದುಗರ ಸಂಖ್ಯೆ ಹೆಚ್ಚಳದಿಂದ ಮಹಾನಗರಕ್ಕೆ ಇನ್ನೂ ಹೆಚ್ಚಿನ ಗ್ರಂಥಾಲಯಗಳು ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಇನ್ನು ಎಷ್ಟು ಮತ್ತು ಯಾವ ಭಾಗಗಳಲ್ಲಿ ಹೆಚ್ಚಿನ ಗ್ರಂಥಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ?*

ಈ) *ಈ ಗ್ರಂಥಾಲಯಗಳನ್ನು ವಿಸ್ತರಿಸಲು ತಗಲುವ ವೆಚ್ಚ ಎಷ್ಟು?*

ಉ) *ಈ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?*